**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ:DTE-ADMI0STR/12/2024

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ,ಬೆಂಗಳೂರು-01
ದಿನಾಂಕ:20/12/2024

**ಪ್ರಕಟಣೆ**

**ವಿಷಯ**:- ಆಯುಕ್ತಾಲಯ ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇಲ್ಲಿನ ಮಾನ್ಯ ನಿರ್ದೇಶಕರ ಕೊಠಡಿಯಲ್ಲಿ ನಿರ್ದೇಶಕರುಗಳ ಹೆಸರುಗಳನ್ನು ನಮೂದಿಸಲು Name boardನ್ನು ಖರೀದಿ ಮಾಡಿ ಅಳವಡಿಸುವ ಬಗ್ಗೆ.

*************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆಯುಕ್ತಾಲಯ ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇಲ್ಲಿನ ಮಾನ್ಯ ನಿರ್ದೇಶಕರವರ ಕೊಠಡಿಯಲ್ಲಿ ನಿರ್ದೇಶಕರುಗಳು ಕಾರ್ಯನಿರ್ವಹಿಸಿರುವ ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಹೆಸರುಗಳನ್ನು ಕನ್ನಡದಲ್ಲಿ ಈ ಕೆಳಗೆ ತಿಳಿಸಿರುವ ನಾಮಫಲಕದಲ್ಲಿ ನಮೂದಿಸಿ ಅಳವಡಿಸಲು "ಅರ್ಹ ಸಂಸ್ಥೆಗಳಿಂದ" ಅಂದಾಜು ದರಪಟ್ಟಿಯನ್ನು ಅಹ್ವಾನಿಸುವ ಸಂಬಂಧ ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ.

| Sl.No | Material Description | Specifications | Quantity |
|---|---|---|---|
| 1. | Name board | Glass material with dimensions of 4W * 6.5L, 5mm thickness with installation & labeling | 01 No's |

ಸದರಿ ಅಂದಾಜು ದರಪಟ್ಟಿಗಳನ್ನು ಮೊಹರು ಮಾಡಿದ, ಮುಚ್ಚಿದ ಲಕೋಟೆಯ ಮೇಲೆ "Quotation for purchase of Name Board" ಎಂದು ನಮೂದಿಸಿ ಆಯುಕ್ತರವರ ಕಛೇರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಭವನ, ಅರಮನೆ ರಸ್ತೆ, ಬೆಂಗಳೂರು-01. ಇವರ ಹೆಸರಿನಲ್ಲಿ ಸಲ್ಲಿಸಲು ತಿಳಿಸಲಾಗಿದೆ, ನಿಗದಿತ ದಿನಾಂಕ ನಂತರ ಸಲ್ಲಿಸಲಾದ ಅಂದಾಜು ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ತಿಳಿಸಲಾಗಿದೆ.

**ಷರತ್ತುಗಳು:**

1. ಮಾರಾಟಗಾರರಿಗೆ ಸಲ್ಲಿಸಲಾದ ಅಂದಾಜು ದರಪಟ್ಟಿ ಮೊತ್ತವು ಮಾರುಕಟ್ಟೆ ದರಕ್ಕಿಂತ ಹೆಚ್ಚುವರಿ ಅನಿಸಿದಲ್ಲಿ ಯಾವುದೇ ಮಾಹಿತಿಯಿಲ್ಲದೆ ಪ್ರಕಟಣೆ ಮಾಡಿರುವ ಕೊಟೇಶನ್ ಅನ್ನು ರದ್ದುಪಡಿಸಿ ಮರು ಪ್ರಕಟಣೆ ಮಾಡಲಾಗುವುದು.

2. ದರಪಟ್ಟಿಯಲ್ಲಿ ಸಾಮಗ್ರಿಗಳ ವಿವರ ಹಾಗೂ ಸಂಪೂರ್ಣ ವಿವರಣೆಯನ್ನು ಸ್ಪಷ್ಟವಾಗಿ ನಮೂದಿಸುವುದು ಹಾಗೂ ಸರಬರಾಜು ವೆಚ್ಚ ಮತ್ತು ಜಿ.ಎಸ್.ಟಿ ವೆಚ್ಚವು ಸಹ ದರಪಟ್ಟಿಯಲ್ಲಿ ತಿಳಿಸಿರಬೇಕು.
3. ದರಪಟ್ಟಿಯನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ದಿ:03/01/2025 ರ ಸಂಜೆ: 5.00ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು.
4. ಯಾವುದೇ ಕಾರಣ ನೀಡದೇ ದರಪಟ್ಟಿಯನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಆಯುಕ್ತರು ಹೊಂದಿರುತ್ತಾರೆ.
5. ವಿತರಣೆಯ ಅವಧಿಯು ಈ ಕಛೇರಿಯಿಂದ ಸರಬರಾಜು ಆದೇಶ ಸ್ವೀಕರಿಸಿದ ದಿನಾಂಕದಿಂದ 15 ದಿನದೊಳಗೆ ಇರಬೇಕು.
6. ಮುದ್ರಣ ಮಾಡಬೇಕಾಗಿರುವ ವಿಷಯಕ್ಕೆ ಸಂಬಂಧಿಸಿದಂತೆ ನಿಗದಿಪಡಿಸಿದ ದಿನಾಂಕದೊಳಗೆ ಕಛೇರಿಗೆ( ಬೆಳ್ಳಿಗೆ 10.30 ರಿಂದ ಸಂಜೆ 5.30 ರೊಳಗಾಗಿ) ಭೇಟಿ ನೀಡಿ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆಯಬಹುದಾಗಿದೆ.
7. ಅನುದಾನ ಲಭ್ಯತೇ ಅನುಸಾರ ಬಿಲ್ಲಿನ ಮೊತ್ತ ಪಾವತಿ ಮಾಡಲಾಗುವುದು.
8. ಮೇಲ್ಕಂಡ ಷರತ್ತುಗಳಿಗೆ ಮತ್ತು ನಿಯಾಮಾವಳಿಗೆ ಬದ್ಧರಾಗಿ ದರಪಟ್ಟಿಯನ್ನು ಸಲ್ಲಿಸುವುದು.

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
20/12/2024

ಇವರಿಗೆ,

1. ಇ-ಆಡಳಿತ ವಿಭಾಗಕ್ಕೆ ಇಲಾಖೆಯ ವೆಬ್ ಸೈಟ್ ನಲ್ಲಿ ಪ್ರಚುರ ಪಡಿಸಲು- ಪ್ರಕಟಿಸಿದ ಬಗ್ಗೆ ದಾಖಲೆಯನ್ನು ಸಂರಕ್ಷಿಸಲು ಸೂಚಿಸಿದೆ.
2. ತಾಂತ್ರಿಕ ಶಿಕ್ಷಣ ಇಲಾಖೆಯ ಸೂಚನಾ ಫಲಕ್ಕೆ.
3. ಕಛೇರಿ ಪ್ರತಿ.